ದಿ.07.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್.ವಿ.ಎ ವಕೀಲರಿಂದ.**

1. ಮಾಹಿತಿ ಕಾಯ್ದೆಯಡಿಯಲ್ಲಿ ಅಬಕಾರಿ ಇಲಾಖೆಯವರು ನೀಡಿರುವ ದಿಃ 20-08-2024 ಮತ್ತು 27-08-2024 ರ ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-05 ಮತ್ತು 06 ಎಂದು ಗುರುತಿಸಲಾಯಿತು.
2. 01 ನೇ ಪ್ರತಿವಾದಿ ಅಬಕಾರಿ ಇಲಾಖೆಗೆ ದಿಃ 15-02-2023 ರಲ್ಲಿ ನೀಡಿದ ಪತ್ರವನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡಿದಿದ್ದು ಆ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-07 ಎಂದು ಗುರುತಿಸಲಾಯಿತು.
3. 01 ನೇ ಪ್ರತಿವಾದಿ ಅಬಕಾರಿ ಇಲಾಖೆಗೆ ಪರವಾನಿಗೆಯನ್ನು ನವೀಕರಣ ಮಾಡಲು ನೀಡಿದ ಅರ್ಜಿಯ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡಿದಿದ್ದು ಆ ದಾಖಲೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-08 ಎಂದು ಗುರುತಿಸಲಾಯಿತು.
4. 14 K-II Challans ಅನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದಿರುವ ದಾಖಲೆಯನ್ನು ಹಾಜರು ಅವುಗಳನ್ನು ಒಟ್ಟಾಗಿ ನಿಪಿ-09 ಎಂದು ಗುರುತಿಸಲಾಯಿತು.
5. GST Registration ನ ದಾಖಲೆ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

6. RTC ದಾಖಲೆಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

7. ಆದಾಯ ತೆರಿಗೆಯ ದಾಖಲೆ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

8. ಬಾಡಿಗೆ ಕರಾರು ದಾಖಲೆ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

9. ಪರವಾನಿಗೆಯ ದಾಖಲೆ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

10. ಮುಚ್ಚಳಿಕೆ ಪತ್ರವನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

11. ಒಂದು ವಂಶವೃಕ್ಷದ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-16 ಎಂದು ಗುರುತಿಸಲಾಯಿತು.

12. ಜೀವಂತ ಸದಸ್ಯರ ದೃಢೀಕರಣ ಪತ್ರದ ದಾಖಲೆ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

13. ನಾಗರಾಜ್ ಮತ್ತು ರತ್ನರವರ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-18 ಮತ್ತು ನಿಪಿ-19 ಎಂದು ಗುರುತಿಸಲಾಯಿತು.

14. Affidavit ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

15. 05 ಮುಚ್ಚಳಿಕೆ ಪತ್ರಗಳ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ಒಟ್ಟಾಗಿ ನಿಪಿ-21 ಎಂದು ಗುರುತಿಸಲಾಯಿತು.

16. ಆಹಾರ ಇಲಾಖೆಗೆ ಪರವಾನಿಗೆ ಕೋರಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದು ಹಾಜರು ಪಡಿಸಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.16.03.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ಹೆಚ್ ವಕೀಲರಿಂದ.**

**1.** ನಾನು ಬಿ.ಎಸ್ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನನಗೆ ಮದುವೆಯಾಗಿ 24 ವರ್ಷವಾಗಿರುತ್ತದೆ. ನನ್ನ ಗಂಡ ನನ್ನ ಜೊತೆಯಲ್ಲಿ ಇರುವುದಿಲ್ಲ. ನನ್ನ ಮತ್ತು ನನ್ನ ಗಂಡನ ನಡುವೆ ವಿವಾಹ ವಿಚ್ಛೇದನಾ ಆಗಿರುವುದಿಲ್ಲ. ನನ್ನ ಮದುವೆಯನ್ನು ನನ್ನ ತಂದೆ ತಾಯಿ ಮಾಡಿಸಿರುತ್ತಾರೆಂದರೆ ಸಾಕ್ಷಿಯು ನನ್ನ ಗಂಡನ ಮನೆ ಕಡೆಯವರು ಮದುವೆ ಮಾಡಿಸಿರುತ್ತಾರೆಂದು ಹೇಳುತ್ತಾರೆ. ಸಾಮಾನ್ಯವಾಗಿ

ಹೆಣ್ಣಿನ ಕಡೆಯವರೇ ಮದುವೆಯನ್ನು ಮಾಡಿಸಿಕೊಡುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಆರೋಗ್ಯ ಚೆನ್ನಾಗಿ ಇಲ್ಲದೆ ಇದ್ದ ಕಾರಣ ನನ್ನ ಗಂಡನ ಮನೆಯ ಕಡೆಯವರೇ ಮದುವೆ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ. ನನ್ನ ಗಂಡನ ಮನೆಯವರು ನಮ್ಮ ಮದುವೆ ಮಾಡಿಸಿದ್ದಾರೆಂದು ತೋರಿಸಲು ನ್ಯಾಯಾಲಯಕ್ಕೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

2. 01 ನೇ ಪ್ರತಿವಾದಿ ನನ್ನ ತಂದೆಯ ಜೊತೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು 01 ನೇ ಪ್ರತಿವಾದಿಯೇ ಶಾಸ್ತ್ರೋತ್ರವಾಗಿ ಬಂಗಾರವನ್ನು ಕೊಟ್ಟು ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯ ನಂತರ ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ನನ್ನ ರೇಷನ್ ಮತ್ತು ಇತರೆ ಸರ್ಕಾರಿ ದಾಖಲೆಗಳಲ್ಲಿನ ವಿಳಾಸ ನನ್ನ ಗಂಡನ ಮನೆಯ ವಿಳಾಸವಾಗಿರುತ್ತದೆ ಎಂದರೆ ಸರಿ.

3. ನಾನು ಸ್ಥಿತಿವಂತಳಾಗಿರುವ ಕಾರಣ ದಾವಾಸ್ವತ್ತುಗಳ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗಳ ಮದುವೆಯನ್ನು ಮಾಡುವ ಸಂದರ್ಭದಲ್ಲಿ 01 ನೇ ಪ್ರತಿವಾದಿ ಹಣಕಾಸಿನ ಸಹಾಯ ಮಾಡಿರುತ್ತಾರೆಂದರೆ ಸಾಕ್ಷಿಯು ನಾವ್ಯಾರು ಮದುವೆ ಮಾಡಿಸಿರುವುದಿಲ್ಲ, ಆಕೆ ಪ್ರೀತಿಸಿ ವಿವಾಹವಾಗಿರುತ್ತಾರೆ ಎಂದು ಹೇಳುತ್ತಾರೆ. ದಾವಾಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಾನು ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾಸ್ವತ್ತಗಳನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ. ನನ್ನ ತಂದೆ ಮತ್ತು 01 ನೇ ಪ್ರತಿವಾದಿ ಸೇರಿ ದಾವಾಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿಯೇ ನನ್ನ ತಂದೆ ತಾಯಿಯನ್ನು ಕೊನೆಯ ತನಕ ನೋಡಿಕೊಂಡಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿ ಬಾಡಿಗೆಗೆ ಅಂಗಡಿ ನೆಡೆಸುತ್ತಿರುತ್ತಾರೆ ಎಂದರೆ ಸರಿ.

4. ನನಗೆ ಯಾವುದಾದರು ದಾಖಲೆಗಳಿಗೆ ಸಹಿ ಮಾಡಬೇಕಾದರೆ ಅದನ್ನು ಓದಿ ನೋಡಿ ಸಹಿ ಮಾಡಬೇಕೆಂಬ ತಿಳುವಳಿಕೆ ನನಗೆ ಇರುತ್ತದೆ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.10.08.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ಹೆಚ್ ವಕೀಲರಿಂದ.**

**5.** ನಾನು ಕಳೆದ 10 ವರ್ಷದಿಂದ ಭವಸಾರ ಕ್ಷತ್ರೀಯ ಸೊಸೈಟಿಯಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸ ಮಾಡುತ್ತಿರುತ್ತೇನೆ. ನನಗೆ 10 ರಿಂದ 12 ಸಾವಿರ ಸಂಭಾವನೆ ಕೊಡುತ್ತಾರೆ. ನನಗೆ ಪಿಗ್ಮಿ ಕಲೆಕ್ಟ್ ಮಾಡಲು ಮಿಷನ್ ಕೊಟ್ಟಿರುತ್ತಾರೆ ಸದರಿ ಮಿಷನಿನಲ್ಲೆ ನಾನು ಲೆಕ್ಕವನ್ನು ಕೊಟ್ಟಿರುತ್ತೇನೆ. ನಾನು ಬಿ.ಎಸ್ಸಿ ವಿದ್ಯಾಭ್ಯಾಸ ಮಾಡಿರುವುದರಿಂದ ನನಗೆ ವ್ಯವಹಾರ ಜ್ಞಾನವಿರುತ್ತದೆ. ಯಾರಾದರು ಏನಾದರು ಹೇಳಿದರೆ ನೋಡಿ ಹೇಳುತ್ತೇನೆಂದು ಹೇಳುತ್ತೇನೆಂದರೆ ಸರಿ. ನಿಪಿ-02 ರಲ್ಲಿರುವ ಎಲ್ಲಾ ಸಹಿಗಳನ್ನು ನನ್ನದೆ ಆಗಿರುತ್ತದೆ. ನಿಪಿ-02 ರಲ್ಲಿ 01 ಮತ್ತು 02 ನೇ ಪ್ರತಿವಾದಿಗಳ ಸಹಿಗಳು ಸಹ ಇರುತ್ತವೆ ಎಂದರೆ ಸರಿ. ನಿಪಿ-02 ಕ್ಕೆ ನಾನು ಉಪನೊಂದಣಾಧಿಕಾರಿ ಕಚೇರಿ ಯಲ್ಲಿ ಸಹಿ ಮಾಡಿರುತ್ತೇನೆ. ನಾನು ಉಪನೊಂದಣಾಧಿಕಾರಿ ಕಚೇರಿಗೆ ಸಂಜೆ ಸುಮಾರು 04-30/5-00 ಗಂಟೆ ಸಮಯದಲ್ಲಿ ಹೋಗಿದ್ದೆ. ನಾನು ಉಪನೊಂದಣಾಧಿಕಾರಿ ಕಚೇರಿಯಲ್ಲಿ ಅರ್ಧ ಗಂಟೆ ಇದ್ದೆ. ಆ ಸಂದರ್ಭದಲ್ಲಿ 01 ಮತ್ತು 02 ನೇ ಪ್ರತಿವಾದಿಗಳು ನನ್ನ ಜೊತೆಯಲ್ಲೆ ಇದ್ದೇವು. ಉಪನೊಂದಣಾಧಿಕಾರಿ ಕಚೇರಿಯಲ್ಲಿ ನಮಗೆ ಸಹಿ ಮಾಡಲು ನಮೆಲ್ಲರನ್ನು ಕರೆದಿರುತ್ತಾರೆ ಆಗ ನಾವೆಲ್ಲರೂ ಒಟ್ಟಿಗೆ ಹೋಗಿ ಸಹಿ ಮಾಡಿರುತ್ತೇವೆ. ಉಪನೊಂದಣಾಧಿಕಾರಿ ಕಚೇರಿಯಲ್ಲಿ ನಾನು ಎಡಗೈ ಹೆಬ್ಬಿಟ್ಟಿನ ಗುರುತನ್ನು ಕೊಡಬೇಕಾದರೆ ಸವಿತಾ ನೀವೇನಾ ಎಂದು ಕೇಳಿರುತ್ತಾರೆ ಆಗ ನಾನು ನಾನೇ ಎಂದು ಹೇಳಿರುತ್ತೇನೆ. ನನ್ನ ಹೆಬ್ಬೆಟ್ಟು ಗುರುತನ್ನು ಪಡೆಯುವ ಮುಂಚೆ ಉಪನೊಂದಣಾಧಿಕಾರಿ ಕಚೇರಿಯ ಸಿಬ್ಬಂದಿಗಳು ನನ್ನನ್ನು ದಾಖಲೆಗೆ ಯಾವ ಉದ್ದೇಶಕ್ಕೆ ಸಹಿ ಮಾಡುತ್ತಿರುತ್ತೀರಾ ಎಂದು ಗೊತ್ತಿರುತ್ತದಾ ಮತ್ತು ಅದರಲ್ಲಿ ಬರೆದಿರುವ ವಿಚಾರಗಳು ನಿಮಗೆ ತಿಳಿದಿರುತ್ತದಾ ಎಂದು ಕೇಳಿದ ನಂತರ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ ಎಂದರೆ, ಸಾಕ್ಷಿಯು ಲಿಕ್ಕರ್ ಶಾಪ್ renewal ಗೆ ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುವುದಾಗಿ ಹೇಳಿರುತ್ತಾರೆ.

**6.** ಬಿ.ಹೆಚ್ ರಸ್ತೆಯಲ್ಲಿ ಜಗನಾಥ ಎನ್ನುವವರು ವಾಚ್ ಅಂಗಡಿ ಇಟ್ಟು ಕೊಂಡಿರುತ್ತಾರೆಂದರೆ ಸರಿ. ಅಣ್ಣೋಜಿರಾವ್ ಅಲಿಯಾಸ್ ಅಣ್ಣಿ ನನಗೆ ಪರಿಚಯವಿರುತ್ತಾರೆ. ಅಣ್ಣೋಜಿರಾವ್ ಅಲಿಯಾಸ್ ಅಣ್ಣಿ ಮತ್ತು ಜಗನಾಥರವರು ಉಪನೊಂದಣಾಧಿಕಾರಿ ಕಚೇರಿಯಲ್ಲಿ ನನ್ನನ್ನು ಮಾತನಾಡಿಸಿರುತ್ತಾರೆ. ನಾನು ಅವರನ್ನು ಮೊದಲು ಮಾತನಾಡಿಸಿರುವುದಿಲ್ಲ. ಅಣ್ಣೋಜಿರಾವ್ ಅಲಿಯಾಸ್ ಅಣ್ಣಿ ಮತ್ತು ಜಗನಾಥರವರು ಉಪನೊಂದಣಾಧಿಕಾರಿ ಕಚೇರಿಯಲ್ಲಿ ಮಾತನಾಡಿಸಿದ ಸಂದರ್ಭದಲ್ಲಿ ನಾನು ಒಂದು Power of Attorney ಗೆ ಸಹಿ ಮಾಡಲು ಬಂದಿರುತ್ತೇನೆಂದು ನಾನು ಅವರಿಗೆ ಹೇಳಿರುತ್ತೇನೆಂದರೆ ಸಾಕ್ಷಿಯು ಅವರೇ ನನಗೆ ಸಾಕ್ಷಿಗಳಾಗಿ ಕರೆದುಕೊಂಡು ಬಂದಿರುತ್ತಾರೆಂದು ಹೇಳಿರುತ್ತಾರೆ. ಅಣ್ಣೋಜಿರಾವ್ ಅಲಿಯಾಸ್ ಅಣ್ಣಿ ಮತ್ತು ಜಗನಾಥರವರು ಇಬ್ಬರು ನಾನು ಸಹಿ ಮಾಡಿದ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನು ಸಹಿ ಮಾಡಿದ ನಂತರ,

ನಾನೊಬ್ಬಳೇ ವಾಪಸ್ಸು ನನ್ನ ಕೆಲಸಕ್ಕೆ ಬಂದಿರುತ್ತೇನೆ. ನಾನು ಪ್ರತಿವಾದಿಗಳನ್ನು ಮತ್ತು ಸಾಕ್ಷಿಗಳನ್ನು ಮಾತನಾಡಿಸದೆ ಸಹಿ ಮಾಡಿ ವಾಪಸ್ಸು ಬಂದಿರುತ್ತೇನೆಂದರೆ ಸರಿ.

**7.** ನಿಪಿ-02 ರಲ್ಲಿನ condition No.05 ಅನ್ನು ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆಂದು ನನಗೆ ಸದರಿ condition ಅನ್ನು ಓದಿ ಹೇಳಿರುವುದಿಲ್ಲ ಎಂದು ಹೇಳಿರುತ್ತಾರೆ. ಉಪನೊಂದಣಾಧಿಕಾರಿ ಕಚೇರಿಗೆ ಬಂದು ಸಹಿ ಮಾಡುವಂತೆ ದಾಖಲೆ ಬರೆದುಕೊಡುವುದಕ್ಕಿಂತ 15 ದಿವಸಗಳ ಮುಂಚ್ಚೆ ನನಗೆ ಹೇಳಿದ್ದರು. 01 ನೇ ಪ್ರತಿವಾದಿ ನನ್ನನ್ನು ಸಹಿ ಮಾಡಲು ಬರುವಂತೆ ಕರೆದ ವಿಚಾರವನ್ನು ಆ 15 ದಿವಸಗಳಲ್ಲಿ ನಾನು ನಮ್ಮ ಕುಟುಂಬದ ಹಿರಿಯರಿಗೆ ಯಾರಿಗೂ ಹೇಳಿರುವುದಿಲ್ಲ.

**8.** ನನ್ನ ತಾಯಿ ಮೃತರಾದ ನಂತರ ನಾನು ಆಸ್ತಿಯಲ್ಲಿ ಪಾಲು ಕೊಡಿ ಎಂದು ಕೇಳಿರುತ್ತೇನೆ. ನನ್ನ ತಾಯಿಯ 11 ದಿನದ ಕಾರ್ಯದಲ್ಲಿ ನಾನು ಹಿಸ್ಸೆ ಕೇಳಬೇಕೆಂದು ಹೇಳಿ ನನಗೆ ಅನ್ನಿಸಿರುವುದಿಲ್ಲ. ನನ್ನ ತಾಯಿ ಮೃತಪಟ್ಟ ಎರಡು-ಮೂರು ತಿಂಗಳ ನಂತರ ಹಿಸ್ಸೆ ಬೇಕೆಂದು ಕೇಳಿರುತ್ತೇನೆ. ನಾನು ಭಾಗಕೇಳಿದ ನಂತರ ನನ್ನ ಮತ್ತು ಪ್ರತಿವಾದಿಗಳ ನಡುವೆ ವೈಮನಸ್ಸು ಶುರುವಾಗಿರುತ್ತದೆ ಎಂದರೆ ಸರಿಯಲ್ಲ. ನಿಮಗೂ ಮತ್ತು 01 ನೇ ಪ್ರತಿವಾದಿಯ ನಡುವೆ ಯಾವಾಗ ವೈಮನಸ್ಸು ಶುರುವಾಗಿರುತ್ತದೆ ಎಂದರೆ ಸಾಕ್ಷಿಯು ಜಿ.ಪಿ.ಎ ಬರೆದುಕೊಟ್ಟ ನಂತರ ನಾನು ಹಿಸ್ಸೆ ಕೇಳಿದಾಗ ಅವರು ಹಿಸ್ಸೆ ಕೊಡುವುದಿಲ್ಲ ಎಂದು ಹೇಳಿರುತ್ತಾರೆ ಆಗ ವೈಮನಸ್ಸು ಶುರುವಾಗಿರುತ್ತದೆ ಎಂದು ಹೇಳುತ್ತಾರೆ. ನಾನು 02 ನೇ ಪ್ರತಿವಾದಿಯ ಬಳಿ ದಾವಾಸ್ವತ್ತುಗಳ ವಿಭಾಗದ ಬಗ್ಗೆ ಮಾತನಾಡಿರುತ್ತೇನೆ. ಜಿ.ಪಿ.ಎ ಗೆ ಸಹಿ ಮಾಡಿದ 03 ತಿಂಗಳ ನಂತರ 02 ನೇ ಪ್ರತಿವಾದಿಗೆ ಹಿಸ್ಸೆ ಕೇಳಿರುತ್ತೇನೆ ಆಗ ನನಗೆ ಅವರು ಏನನ್ನು ಕೊಡುವುದಿಲ್ಲ ಎಂದು ಹೇಳಿರುತ್ತಾರೆ. 01 ನೇ ಪ್ರತಿವಾದಿಯು ಲಿಕ್ಕರ್ ಶಾಪ್ ಖರ್ಚಿಗಾಗಿ 03 ಲಕ್ಷ ಬೇಕೆಂದು ಹೇಳಿ ನನ್ನಿಂದ 2023 ರ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ತೆಗೆದುಕೊಂಡಿರುತ್ತಾರೆ. ನಾನು ಉಪನೊಂದಣಾಧಿಕಾರಿ ಕಚೇರಿಗೆ ಹೋಗುವುದಕ್ಕಿಂತ 07/08 ತಿಂಗಳ ಮುಂಚ್ಚೆ 03 ಲಕ್ಷ ರೂ. ಕೊಟ್ಟಿರುತ್ತೇನೆ. ನಾನು 01 ನೇ ಪ್ರತಿವಾದಿಗೆ ಹಣ ನೀಡಿರುವುದರ ಬಗ್ಗೆ ಬರವಣಗೆಯಾಗಿರುವುದಿಲ್ಲ.

**9.** ಜನ ಸಮೃದ್ಧಿ ಮಲ್ಟಿ ಕೋಂ.ಆಪರೇಟೀವ್ ಸೋಸೈಟಿಯಲ್ಲಿ 08 ಲಕ್ಷ ರೂ. ಗೆ ಎಫ್.ಡಿ ಇಟ್ಟಿದ್ದರು ಎಂದರೆ ಸಾಕ್ಷಿಯು 04 ಲಕ್ಷ ರೂ. ಎಫ್.ಡಿ ಇಟ್ಟಿದ್ದರು ಎಂದು ಹೇಳುತ್ತಾರೆ. 01 ನೇ ಪ್ರತಿವಾದಿ ನಾಮಿನಿಯಾಗಿದ್ದರು. ನನ್ನ ತಾಯಿಯ ಹೆಸರಿನಲ್ಲಿ ಆರ್.ಡಿ ಇದ್ದು ಅದು 03 ಲಕ್ಷ ರೂ. ಆಗಿತ್ತು ಎಂದರೆ ಸಾಕ್ಷಿಯು 47 ಸಾವಿರ ರೂ. ಆಗಿತ್ತು ಎಂದು ಹೇಳುತ್ತಾರೆ. ಬ್ಯಾಂಕ್ ಆಫ್ ಬರೋಡಾದಲ್ಲಿ ನನ್ನ ತಾಯಿಯ ಬ್ಯಾಂಕ್ ಖಾತೆ ಇತ್ತು ಎಂದರೆ ಸರಿ. ನನ್ನ ತಾಯಿಯ ಹೆಸರಿನಲಿದ್ದಂತಹ ಎಫ್.ಡಿ, ಆರ್.ಡಿ ಮತ್ತು ಬ್ಯಾಂಕ್ ಆಫ್ ಬರೋಡಾದಲ್ಲಿ ಇದ್ದಂತಹ ಹಣವನ್ನು ನಾನೇ withdraw ಮಾಡಿರುತ್ತೇನೆಂದರೆ ಸರಿಯಲ್ಲ. ಹಣವನ್ನು ಯಾರು

withdraw ಮಾಡಿದ್ದಾರೆಂದು ತಿಳಿದುಕೊಳ್ಳಲು ಜನ ಸಮೃದ್ಧಿ ಮಲ್ಟಿ ಕೋಂ.ಆಪರೇಟೀವ್ ಸೋಸೈಟಿ ಮತ್ತು ಬ್ಯಾಂಕ್ ಆಫ್ ಬರೋಡಾದವರನ್ನು ಕರೆಸಿ ಸಾಕ್ಷಿ ವಿಚಾರಣೆ ಮಾಡಲು ನನಗೆ ಯಾವುದೇ ತಕರಾರು ಇರುವುದಿಲ್ಲ.

**10.** ನನ್ನ ತಂದೆ ಒಳ್ಳೆಯ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಆದರೆ ಅವರಿಗೆ ವಯಸ್ಸಾಗುತ್ತಾ ಬಂದಂತೆ ವ್ಯಾಪಾರದಲ್ಲಿ ನಷ್ಟ ಉಂಟಾಗಿರುತ್ತದೆ. ನಾನು ಒಬ್ಬಳೇ ಮಗಳಾಗಿದ್ದ ಕಾರಣ ಅತೀ ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಜನಾಂಗದಲ್ಲಿ ಹೆಣ್ಣು ಮಕ್ಕಳ ಮನೆಯವರೇ ಮದುವೆ ಮಾಡಿಕೊಡುತ್ತಾರೆಂದರೆ ಸರಿಯಲ್ಲ. ಮದುವೆ ಮಾತುಕತೆ ಏನು ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಮದುವೆಯ ಸಂದರ್ಭದಲ್ಲಿ ನನಗೆ 150 ಗ್ರಾಂ ಬಂಗಾರವನ್ನು ನನ್ನ ತಂದೆ ಕೊಟ್ಟಿರುತ್ತಾರೆಂದರೆ ಸಾಕ್ಷಿಯು 50 ಗ್ರಾಂ ಬಂಗಾರವನ್ನುಕೊಟ್ಟಿರುತ್ತಾರೆಂದು ಹೇಳುತ್ತಾರೆ. ನನ್ನ ತಂದೆ ಮದುವೆ ಕಾರ್ಯಗಳಿಗೆ 10 ಲಕ್ಷ ರೂ.ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಒಂದು ಲಕ್ಷ ರೂ.ವರದಕ್ಷಿಣೆ, bracelet, ಉಂಗುರ ಮತ್ತು ಚೈನ್ ಕೊಟ್ಟಿದ್ದರು ಎಂದರೆ ಸಾಕ್ಷಿಯು ಉಂಗುರ ಮತ್ತು ಚೈನ್ ಮಾತ್ರ ಕೊಟ್ಟಿದ್ದರು ಎಂದು ಹೇಳುತ್ತಾರೆ.

**11.** ನನ್ನ ಗಂಡನ ಮನೆ ಕಡೆಯವರು ತಿಪಟೂರಿನಲ್ಲಿ ಒಳ್ಳೆಯ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನನಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬರಿಗೆ ಮದುವೆಯಾಗಿರುತ್ತದೆ ಇನ್ನೊಬ್ಬಳು ಇಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಹೋಗುತ್ತಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಸೇರಿದ ಬಂಗಾರವನ್ನು ನಾವು ಮೂವರು ಮಕ್ಕಳು ಸಮನಾಗಿ ಹಂಚಿಕೊಂಡಿರುತೇತೇವೆ ಎಂದರೆ ಸರಿಯಲ್ಲ. ತಲಾ 38 ಗ್ರಾಂ ಬಂಗಾರ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೇನು ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಮೂರು ಲಕ್ಷ ರೂ. ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಸಮಯದಲ್ಲಿ ಒಟ್ಟು ಕುಟುಂಬದ ಕಡೆಯಿಂದ ನನಗೆ 09 ಲಕ್ಷ ರೂ. ಹಣ ಬಂದಿರುತ್ತದೆ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ನಾನು ಎರಡನೇ ಪಾರ್ಟಿಯಾಗಿ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿರುತ್ತಾರೆ. ವಿಭಾಗ ಪತ್ರದಲ್ಲಿ ನನ್ನ ಹಿಸ್ಸೆ ಗೆ 09 ಲಕ್ಷ ರೂ. ಮತ್ತು 150 ಗ್ರಾಂ ಚಿನ್ನ ಎಂದು ತೋರಿಸಿರುತ್ತಾರೆಂದರೆ ಸಾಕ್ಷಿಯು ನನಗೇನು ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ವಿಭಾಗ ಪತ್ರದಲ್ಲಿ 02 ನೇ ಪ್ರತಿವಾದಿಯ ಹಿಸ್ಸೆ ಗೆ 08 ಲಕ್ಷ ರೂ. ಎಂದು ತೋರಿಸಿರುತ್ತಾರೆಂದರೆ ಸರಿ. ವಿಭಾಗ ಪತ್ರದಲ್ಲಿ 01 ನೇ ಪ್ರತಿವಾದಿಗೆ ದಾವಾಸ್ವತ್ತು ಅವರ ಹಿಸ್ಸೆ ಎಂದು ತೋರಿಸಿರುತ್ತಾರೆಂದರೆ, ಆ ರೀತಿ ತೋರಿಸಿರುತ್ತಾರೆ ನಾನು ಸಹಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ವಿಭಾಗ ಪತ್ರವಾದ ನಂತರ 01 ನೇ ಪ್ರತಿವಾದಿಯ ಮನೆಗೆ ಎಲ್ಲಾ ಕಾರ್ಯಗಳಿಗೆ ಹೋಗುತ್ತಿದ್ದೆ ಎಂದರೆ ಸಾಕ್ಷಿಯು ಅವರು ನನ್ನನು ಬರಬೇಡ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ವಿಭಾಗಪತ್ರದ ಪ್ರಕಾರ 01ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ನಗರಸಭೆಗೆ ಮೋಸದಿಂದ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆಂದು ಹೇಳಿ ನೀವು

ತಕರರು ಅರ್ಜಿಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಾನು ಕೊಡಲು ಹೊಗಿರುತ್ತೇನೆ ಆದರೆ ಅವರು ಈಗ ಸಮಯವಾಗಿರುತ್ತದೆ ನೀವು ವಕೀಲರನ್ನು ಬೇಟಿ ಮಾಡಿ ಎಂದು ಹೇಳಿದ್ದರಿಂದ ನಾನು ಈ ದಾವೆಯನ್ನು ಮಾಡಿರುತ್ತೇನೆ. ವಿಭಾಗಪತ್ರವಾದ ವಿಚಾರ ಗೊತ್ತಾದ ನಂತರ ನಾನು ಪಂಚಾಯ್ತಿಯನ್ನು ಮಾಡಿಸಿರುತ್ತೇನೆ ಆದರೆ ಅವರು ನನಗೆ ಭಾಗಕೊಡುವುದಿಲ್ಲ ಎಂದು ಹೇಳಿರುತ್ತಾರೆ. ವಿಭಾಗ ಪತ್ರದಲ್ಲಿ ತೋರಿಸಿರುವ 09 ಲಕ್ಷ ರೂ.ಗಳಲ್ಲಿ 03 ಲಕ್ಷ ರಾಮಕೃಷ್ಣರವರ ಮಗ ಕಿರಣ್ ರವರ ಬಳಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ 03 ಲಕ್ಷ ಕಿರಣ್ ರವರ ಬಳಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಜಿ.ಪಿ.ಎ ಮತ್ತು ವಿಭಾಗ ಪತ್ರದ ಆಧಾರದ ಮೇಲೆ 03 ಲಕ್ಷ ಕಿರಣ್ ರವರ ಬಳಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಮೋಸವಾಗಿದೆ ಎಂದು ನನ್ನ ಆರು ಜನ ಚಿಕ್ಕಪ್ಪನವರ ಕುಟುಂಬದವರಿಗೆ ನಾನು ತಿಳಿಸಿರುತ್ತೇನೆ. ಪೊಲೀಸರಿಗೆ ದೂರು ಕೊಡುವಂತೆ ನನಗೆ ಹೇಳಿರುವುದಿಲ್ಲ ಆದರೆ 01 ನೇ ಪ್ರತಿವಾದಿಗೆ ಮೋಸ ಮಾಡಬೇಡ ಎಂದು ಬುದ್ಧಿವಾದ ಹೇಳಿರುತ್ತಾರೆ ಎಂದು ಸಾಕ್ಷಿಯು ಹೇಳುತ್ತಾರೆ. ನನಗೆ ಮೋಸ ಆಗಿದೆ ಎಂದು ನಮ್ಮ ಕುಟುಂಬಸ್ಥರನ್ನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಕರೆದುಕೊಂಡು ಬರುತ್ತೀರಾ ಎಂದರೆ ಸಾಕ್ಷಿಯು ಕರೆದುಕೊಂಡು ಬರುವುದಾಗಿ ಹೇಳುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ